# ಕಾನೂನು ವಿಭಾಗದ ಕಾರ್ಯವ್ಯಾಪ್ತಿಗಳು

1) ವಿವಿಧ ಆಂತರಿಕ ಇಲಾಖೆಗಳಿಂದ ಕಾನೂನು ಅಭಿಪ್ರಾಯ ಕೋರಿ ಬರುವ ಕಡತಗಳನ್ನು ಕಡತಗಳಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಕಾನೂನು ಅಭಿಪ್ರಾಯ ನೀಡುವುದು.

2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತ ವ್ಯವಸ್ಥೆಯು ಕೆ.ಎಂ.ಸಿ, ಕಾಯ್ದೆ 1976ರಡಿಯಲ್ಲಿ ನಡೆಯುತ್ತಿದೆ. ಕೆ.ಎಂ.ಸಿ ಕಾಯ್ದೆ ಕಲಂ58 ಮತ್ತು 59ರಡಿಯಲ್ಲಿ ಕೆಲವು ಆದ್ಯ ಕರ್ತವ್ಯಗಳನ್ನು ಹಾಗೂ ವಿವೇಚನಾ ಕಾರ್ಯಗಳನ್ನು ನಿರ್ವಹಿಸಬೇಕಾಗಿರುತ್ತದೆ. ಕೆ.ಎಂ.ಸಿ ಕಾಯ್ದೆಯ ನಿಯಮಗಳ ವಿರುದ್ಧವಾಗಿ ನಡೆಯುವ ಎಲ್ಲಾ ಪ್ರಕ್ರಿಯೆಗಳ ವಿರುದ್ಧ ಕ್ರಮ ಜರುಗಿಸಬೇಕಾಗಿರುತ್ತದೆ. ಅಲ್ಲದೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಿಬ್ಬಂದಿ ವರ್ಗಕ್ಕೆ ಕೆ.ಸಿ.ಎಸ್.ಆರ್ ಮತ್ತು ಸಿ.ಸಿ.ಎ ನಿಯಮಗಳು ಅನ್ವಯ ಆಗುವುದರಿಂದ ಈ ನಿಯಮಗಳ ಅಡಿಯಲ್ಲಿಯೂ ಕ್ರಮ ಜರುಗಿಸಬೇಕಾಗಿರುತ್ತದೆ. ಅದರಂತೆ ಸಾಮಾನ್ಯವಾಗಿ ಈ ಕೆಳಗಿನ ವಿಷಯಗಳಲ್ಲಿ ನ್ಯಾಯಾಲಯಗಳಲ್ಲಿ ಸಾರ್ವಜನಿಕರು ಪ್ರಕರಣಗಳನ್ನು ದಾಖಲು ಮಾಡಿರುತ್ತಾರೆ. ಸಾರ್ವಜನಿಕರು ಕಾನೂನನ್ನು ವಿಶೇಷವಾಗಿ ಉಲ್ಲಂಘನೆ ಮಾಡುವ ಕಾರಣಗಳಿಂದಲ್ಲೆ ಕಾನೂನು ವಿಭಾಗದ ಕಾರ್ಯಗಳು ಹೆಚ್ಚಾಗಿರುತ್ತವೆ.

**ಅ)** ಕೆ.ಎಂ.ಸಿ. ಕಾಯ್ದೆ ಕಲಂ321ರ ಅಡಿಯಲ್ಲಿ ನಿಯಮ ಬಾಹಿರವಾಗಿ ನಿರ್ಮಾಣ ಮಾಡುವ ಕಟ್ಟಡಗಳ ಮಾಲೀಕರ ವಿರುದ್ಧ ಕ್ರಮ ಜರುಗಿಸುವ ಪ್ರಕರಣಗಳು.

**ಆ)** ಶಿಥಿಲವಾದ ಕಟ್ಟಡಗಳ ಮಾಲೀಕರ ವಿರುದ್ಧ ಕೆ.ಎಂ.ಸಿ ಕಾಯ್ದೆ ಕಲಂ322ರ ಅಡಿಯಲ್ಲಿ ಕ್ರಮ ಜರುಗಿಸುವ ಪ್ರಕರಣಗಳು.

**ಇ)** ಕಟ್ಟಡಗಳಿಗೆ ಕಂದಾಯ ನಿಗಧಿಪಡಿಸುವಾಗ, ಅತೃಪ್ತರಾದ ಕಟ್ಟಡಗಳ ಮಾಲೀಕರು ಹೂಡುವ ಪ್ರಕರಣಗಳು.

**ಈ)** ನಗರ ಪಾಲಿಕೆಯ/ಸಾರ್ವಜನಿಕ ಸ್ವತ್ತುಗಳನ್ನು ಅನಧೀಕೃತವಾಗಿ ಒತ್ತುವರಿ ಮಾಡಿಕೊಂಡಿರುವ ಪ್ರಕರಣಗಳು.

**ಉ)** ನಗರ ಪಾಲಿಕೆಯನ್ನು Formal Party ಮಾಡಿ ನಾಗರೀಕರು ಪರಸ್ಪರ ಹೂಡುವ ಪ್ರಕರಣಗಳು.

**ಊ)** ಅನಧಿಕೃತ ಜಾಹೀರಾತು ಫಲಕಗಳ ಮಾಲೀಕರು ಹೂಡುವ ಪ್ರಕರಣಗಳು.

**ಎ)** ಮಾರುಕಟ್ಟೆಯಲ್ಲಿನ ಮಳಿಗೆಗಳ ಬಾಡಿಗೆ ನಿಗಧಿಪಡಿಸುವ ಹಾಗೂ ಮಂಜೂರಾತಿ ಮಾಡುವ ವಿಚಾರವಾದ ಪ್ರಕರಣಗಳು.

ಏ) ಸಿಬ್ಬಂದಿ ವರ್ಗದವರು ಹೂಡುವ ಶಿಸ್ತುಪಾಲಾನ/ಸೇವಾ ಹಿರಿತನ/ಮುಂಬಡ್ತಿ ವಿಚಾರಗಳಲ್ಲಿನ ಪ್ರಕರಣಗಳು.

ಒ) ನಗರ ಪಾಲಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂಪಿಸಬಹುದಾದಂತಹ ನಿಯಮಗಳನ್ನು (ಕಸ ವಿಲೇವಾರಿ/ಟಿ.ಡಿ.ಆರ್/ರಸ್ತೆಗಳ ವಿಸ್ತರಣೆ/ಟೆಂಡರ್ ಪ್ರಕ್ರಿಯೆ ಇತ್ಯಾದಿ ವಿಷಯಗಳನ್ನು ಪ್ರಶ್ನಿಸಿ ನ್ಯಾಯಾಲಯಗಳ ಮುಂದೆ ಹೂಡಬಹುದಾದ ಪ್ರಕರಣಗಳು.

ಓ) ಮಾಹಿತಿ ಹಕ್ಕು ಕಾಯ್ದೆಡಿಯಲ್ಲಿ ಹೂಡುವ ಪ್ರಕರಣಗಳು.

ಔ) ಮಾನವ ಹಕ್ಕು ಕಾಯ್ದೆಡಿಯಲ್ಲಿ ಹೂಡುವ ಪ್ರಕರಣಗಳು.

3) ಪಾಲಿಕೆಯ ವಿರುದ್ಧ ಹೂಡಲಾಗುವ ಪ್ರಕರಣಗಳಲ್ಲಿ ಕಾನೂನು ಕೋಶದ ಮುಖ್ಯಸ್ಥರ ಆದೇಶದನ್ವಯ ವಲಯವಾರು ವಕೀಲರುಗಳಿಗೆ/ವಿಷಯಾದಾರಿತದ ಮೇಲೆ ವಕೀಲರುಗಳಿಗೆ ವಹಿಸುವುದು. ಸಂಬಂಧಪಟ್ಟ ಇಖಾಲೆಗಳಿಂದ ಕಂಡಿಕೆವಾರು ಟಿಪ್ಪಣಿಗಳನ್ನು ಹಾಗೂ ದಾಖಲೆಗಳ ಪ್ರತಿಗಳನ್ನು ತರಿಸಿ ಅವುಗಳನ್ನು ಪರಿಶೀಲಿಸಿ ವಕೀಲರ ಮುಖಾಂತರ ನ್ಯಾಯಾಲಯಗಳ ಮುಂದೆ ನಿಯಮಾನುಸಾರ ಪ್ರತಿವಾದ ಮಂಡಿಸುವುದು ಹಾಗೂ ನ್ಯಾಯಾಲಯಗಳು ನೀಡಬಹುದಾದ ತಡೆಯಾಜ್ಞೆಗಳ ತೆರವಿಗಾಗಿ ವಕೀಲರ ಮುಖಾಂತರ ಕ್ರಮತೆಗೆದುಕೊಳ್ಳುವುದು ಮತ್ತು ಪ್ರಕರಣಗಳ ಶೀರ್ಘ ಇತ್ಯರ್ಥಕ್ಕಾಗಿ ಕ್ರಮತೆಗೆದುಕೊಳ್ಳುವುದು.

4) ನ್ಯಾಯಾಲಯಗಳಲ್ಲಿ ಪಾಲಿಕೆಯ ಪರವಾಗಿ ಇತ್ಯರ್ಥಗೊಂಡ ಪ್ರಕರಣಗಳಲ್ಲಿನ ತೀರ್ಪುಗಳನ್ನು ಆಯಾ ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಿ ನ್ಯಾಯಾಲಯದ ಆದೇಶಗಳನ್ನು ಪಾಲಿಸುವಲ್ಲಿ ಶೀಘ್ರ ಕ್ರಮ ತೆಗೆದುಕೊಳ್ಳುವಂತೆ ಸೂಚನೆ ನೀಡುವುದು.

5) ನ್ಯಾಯಾಲಯಗಳಲ್ಲಿ ಪಾಲಿಕೆಗೆ ನಿರ್ದೇಶನ ನೀಡಿದಂತ ಪ್ರಕರಣಗಳಲ್ಲಿ ನಿಗಾ ವಹಿಸಿ ನಿಗಧಿತ ಅವಧಿಯೊಳಗೆ ಕ್ರಮತೆಗೆದುಕೊಳ್ಳುವಂತೆ ಸಂಬಂಧಪಟ್ಟ ಇಲಾಖೆಗೆ ಹಾಗೂ ನ್ಯಾಯಾಲಯಗಳು ನೀಡುವ ಆದೇಶಗಳನ್ನು ಪಾಲಿಸುವಲ್ಲಿ ಜಾಗ್ರತೆಯಾಗಿ ಕಾರ್ಯ ನಿರ್ವಹಿಸುವಂತೆ ಆಯಾ ಸಂಬಂಧಪಟ್ಟ ಇಲಾಖೆಗಳಿಗೆ ಸೂಚನೆ ನೀಡುವುದು.

6) ಮುಖ್ಯವಾಗಿ ನಗರ ಪಾಲಿಕೆ ಸ್ವತ್ತುಗಳ ಬಗ್ಗೆ ಅತಿ ಮುತುವರ್ಜಿ ವಹಿಸಿ ನಗರ ಪಾಲಿಕೆ ಸ್ವತ್ತುಗಳನ್ನು ಸಂರಕ್ಷಿಸುವಲ್ಲಿ ವಿಶೇಷ ಆಸಕ್ತಿ ವಹಿಸುವುದು.

7) ನ್ಯಾಯಾಲಯಗಳ ಆದೇಶಗಳನ್ನು ಪಾಲನೆ ಮಾಡುವುದು ಅಥವಾ ಮೇಲ್ಮನವಿ ಸಲ್ಲಿಸುವುದರೊಂದಿಗೆ ನ್ಯಾಯಾಲಯನಿಂದನೆ ಪ್ರಕರಣಗಳು ಆಗದಂತೆ ನೋಡಿಕೊಳ್ಳುವುದು.

8) ನಗರ ಪಾಲಿಕೆ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸರ್ಕಾರದ ವಿವಿಧ ಇಲಾಖೆಗಳಿಂದ ಲಭ್ಯವಿರುವ ದಾಖಲೆಗಳ ಪ್ರತಿಗಳನ್ನು ಪಡೆದು ನಗರ ಪಾಲಿಕೆಯ ಹಿತಾಸಕ್ತಿಯನ್ನು ಕಾಪಾಡಲು ಸಮರ್ಥವಾಗಿ ನ್ಯಾಯಾಲಯಗಳ ಮುಂದೆ ಪ್ರತಿವಾದ ಮಂಡಿಸುವುದು.

....3

9) ನ್ಯಾಯಾಲಯಗಳು ನೀಡುವ ಆದೇಶಗಳನ್ನು ಹಾಗೂ ತಿಳುವಳಿಕೆಗಳನ್ನು ನಗರ ಪಾಲಿಕೆಯ ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಗೂ ಸುತ್ತೋಲೆ ಮೂಲಕ ತಿಳಿಯಪಡಿಸುವುದು ಹಾಗೂ ಮುಂದೆ ಸಂಭವಿಸಬಹುದಾದ ತಪ್ಪುಗಳನ್ನು ತಡೆಗಟ್ಟುವುದು.

10) ಅಲ್ಲದೆ ಪೂಜ್ಯ ಮಹಾಪೌರರು ಹಾಗೂ ಮಾನ್ಯ ಆಯುಕ್ತರು/ಅಪರ ಆಯುಕ್ತರು ಸೂಚಿಸುವ ಕೆಲಸ ಕಾರ್ಯಗಳನ್ನು ನಿರ್ವಹಿಸುವುದು.

**ಕಾನೂನು ಕೋಶದ ಮುಖ್ಯಸ್ಥರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,**
**ಬೆಂಗಳೂರು.**